# ಚಂದಮಾಮ



ಚಂದಮಾಮ ಓಡಿ ಬಾ
ಚಂದದಿಂದ ಆಡು ಬಾ ||
ತಿಂಡಿ ತಿನಿಸು ಕೊಡ್ತೀನಿ
ಗಿಂಡಿ ಹಾಲು ತರ್ತೀನಿ
ಮೊಂಡುತನ ಮಾಡ್ಬೇಡ
ಚಂಡಿಯಾಗಿ ನಿಲ್ಬೇಡ
ಓಡಿ ಓಡಿ ಕರಗ್ಬೇಡ
ಕಣ್ಣಿಗೆ ಕಾಣದೆ ಹೋಗ್ಬೇಡ ||
ಚಂದಮಾಮ ಓಡಿ ಬಾ
ಚಂದದಿಂದ ಆಡು ಬಾ ||

# ಸೋಮಾರಿ ತಿಮ್ಮ

ಶಾಲೆಗೆ ಹೋಗೋ ತಿಮ್ಮ
ಪಠ್ಯ ಪುಸ್ತಕ ಇಲ್ಲಮ್ಮ |
ಜಳಕ ಮಾಡೋ ತಿಮ್ಮ
ಕಾಯಿಸಿದ ನೀರೆ ಇಲ್ಲಮ್ಮ |
ಊಟಕ್ಕೆ ಬಾರೋ ತಿಮ್ಮ
ಬಂದೆನು ಬೇಗ ಬಡಿಸಮ್ಮ ||

